ಪ್ರತಿ ಪ್ರಾತಃಕಾಲವೂ ಪ್ರಕಟಿಸಲ್ಪಡುವುದು.
ಚಂದಾ ತಿಂಗಳಿಗೆ 10 ಆಣೆ.

REGD. No. M 1184.

ಕ್ರಯ ಬಿಡಿ ಪತ್ರಿಕೆ 1 ಕ್ಕೆ 6 ಪೈ
ಟಪಾಲು ಹಾಸಲು ಬೇರೆ.

ಮೈಸೂರು

ಸಂಪದಭ್ಯುದಯ

THE WEALTH OF MYSORE.

ಉದ್ಯೋಗಿನಂ ಪುರುಷಸಿಂಹಮುಪೈತಿಲಕ್ಷ್ಮೀಃ ದೈವೇನದೇಯಮಿತಿಕಾಪುರುಷಾವದನ್ತಿ
ದೈವಂ ನಿಹತ್ಯ ಕುರುಪೌರುಷಮಾತ್ಮಶಕ್ತ್ಯಾ ಯತ್ನೇ ಕೃತೇ ಯದಿನ ಸಿಧ್ಯತಿ ಕೋತ್ರ ದೋಷಃ ॥

[ಸಂಪುಟ ೨.] ಮೈಸೂರು, ೯೯ ನೇ ಜನವರಿ, ೧೯೦೬. (ಸಂಚಿಕೆ ೮೬)

ಸಂಪದಭ್ಯುದಯ.

ಶನಿವಾರ, ೯೯ ನೇ ಜನವರಿ, ೧೯೦೬.

ಮೈಸೂರು ಪ್ರೆಸ್ ರೆಗ್ಯುಲೇಷನ್.

—o—

ನಮ್ಮ ಸಂಸ್ಥಾನದ ಲೆಜಿಸ್ಲೆಟಿವ್ ಕೌನ್ಸಿಲ್ಲಿನಲ್ಲಿ ಪ್ರೆಸ್ ರೆಗ್ಯುಲೇಷನ್‌ನಿಂದ ಉದ್ದೇಶಿಸಲ್ಪಟ್ಟ ಇಷ್ಟಾರ್ಥಗಳು ನಡೆದುವೇ ಎಂದು ಪ್ರಶ್ನೆಮಾಡಲ್ಪಟ್ಟಿರುವುದು. ನಡೆಯಿತೆಂದು ನಾವು ಧಾರಾಳವಾಗಿ ಹೇಳಬಹುದು. ಪ್ರೆಸ್ ರೆಗ್ಯುಲೇಷನ್ನಿನ ಉದ್ದೇಶವೇನು? ಈ ವಿಷಯವಾಗಿ ನಮ್ಮ ಮಹಾರಾಜರವರು ಇಂಡಿಯಾ ಗವರ್ನ್‌ಮೆಂಟಿಗೆ ಬರೆದ ಡಿಸ್ ಪ್ಯಾಚ್‌ನಲ್ಲಿ ನಮ್ಮ ದೇಶದಲ್ಲಿ ಜನಗಳು ಅಕೃತ್ರಿಮವಾದ ರಾಜಭಕ್ತಿ ವಿಶ್ವಾಸಗಳುಳ್ಳವ ಥ ಸ್ತ್ರೀಯರೂ, ಬಾಲಕರೂ ಈ ಸಂಸ್ಥದ ಆಲಯದಲ್ಲಿ ಪೋಷಿಸಲ್ಪಟ್ಟು ಸುಖವಾಗಿ ಜೀವಿಸುವುದಕ್ಕೆ ಸಾಧಕವಾದ ಯಾವುದಾದರೂ ಒಂದು ಜೀವನೋಪಾಯವನ್ನು ಅಭ್ಯಾಸಮಾಡುತ್ತಾರೆ. ಈಗ ಈ ಆಲಯದಲ್ಲಿ ಹೆಂಗಸರೂ, ಮಕ್ಕಳೂ ಸೇರಿ 31 ಜನರಿರುತ್ತಾರೆ. ಅನಾಥರಾದ ಮಕ್ಕಳು ಸಿಕ್ಕಿದರೆ ಪೊಲೀಸ್ ಅಧಿಕಾರಿಗಳೂ, ಇತರ ಮಹನೀಯರೂ ಅವರನ್ನು ಪೋಷಣೆಗಾಗಿ ಈ ಸಂಸ್ಥೆಕ್ಕೆ ಕಳುಹಿಸುತ್ತಾರೆ. ಈ ಅನಾಥಾಲಯದಲ್ಲಿ ಒಟ್ಟೆಯನ್ನು ಅಳತೆಗೆ ಸರಿಯಾಗಿ ಕತ್ತರಿಸುವ ಕೆಲಸವೂ, ಹೊಲಿಯುವ ಕೆಲಸವೂ ಕಾಲು ಚೀಲವೇ ಮೊದಲಾದ ವುಗಳನ್ನು ಮಾಡುವ ಕಸೂತಿಯ ಕೆಲಸವನ್ನೂ, ಸೊಗಸಾದ ತಿಂಡಿಗಳನ್ನು ಮಾಡುವ ಅಡಿಗೆಯ ಕೆಲಸವೂ, ಗಾಯಹೊಂದಿದವರಿಗೆ ಮೊದಲು ಮಾಡಬೇಕಾದ ಸಹಾಯದ ವಿಷಯವೂ, ಸೂಲಗಿತ್ತಿಯರ ಮತ್ತು ದಾದಿಯರ ಕೆಲಸವೂ, ಸಂಗೀತವೂ, ಚಿತ್ರವನ್ನು ಬರೆಯುವ ವೈ. ನಾರಾಯಣರವರು ಖುದ್ದಾಗಿ ಅಮೆರಿಕಾ ಖಂಡಕ್ಕೆ ಹೋಗಿ 27 ಸಾವಿರ ರೂಪಾಯಿಗಳನ್ನು ಕೊಟ್ಟು ಈ ಎಣ್ಣೆಯ ತಯಾರಿಗೆ ಬೇಕಾದ ಯಂತ್ರಗಳನ್ನು ಖರೀದಿಮಾಡಿರುವರು. ಶೀಘ್ರದಲ್ಲಿಯೇ ಈ ಯಂತ್ರವನ್ನು ತೆಗೆದುಕೊಂಡು ಬರುವರು. ಕಡೂರು ಮತ್ತು ಶಿವಮೊಗ್ಗ ಫಾರೆಸ್ಟ್ಟುಗಳಲ್ಲಿ ಈ ಎಣ್ಣೆ ಬೀಜಗಳನ್ನು ಶೇಖರಿಸಿಕೊಳ್ಳುವುದಕ್ಕೆ ಮೈಸೂರು ಗವರ್ನ್‌ಮೆಂಟಿನವರು ಈ ಕಂಪೆನಿಯವರಿಗೆ ಹಕ್ಕನ್ನು ಕೊಟ್ಟಿರುವರು. ಈ ಹಕ್ಕನ್ನು ಕೊಟ್ಟಿದ್ದಕ್ಕೆ ಪ್ರತಿಫಲವಾಗಿ ಈ ಕಂಪೆನಿಯವರು ವರ್ಷಕ್ಕೆ 4,000 ರೂಪಾಯಿಗಳನ್ನು ಕೊಡುವುದಕ್ಕೆ ಒಪ್ಪಿರುವರು.

ರವೀಂದ್ರನಾಥ ಟಾಗೋರ್‌ರವರು ಫಲ್ಗುನಿ ಎಂಬ ನಾಟಕವನ್ನು ಬರೆದು ಆಡಿಸುವುದಕ್ಕೂ ಉಪಕ್ರಮ ಮಾಡಿರುವರು. ಈ ನಾಟಕದ ಮುಖ್ಯತಾತ್ಪರ್ಯವು ಜನಗಳು ಮರಣವನ್ನು ಹೊಂದಿದ ಮಾತ್ರದಿಂದಲೇ ಅವ

ಕುತ್ತಾ ವಿಷೇಶ ಫಿರಂಗಿಗಳಿಂದ ಗುಂಡುಗಳನ್ನು ಹೊಡೆಯುತ್ತಾ ಕತ್ತುಗಳಿಗೆ ಬಹಳ ನಷ್ಟವನ್ನು ಮಾಡುತ್ತಲಿರುವರು. ಈ ವಿಮಾನದಲ್ಲಿ ಮಿತ್ರಮಂಡಲಿಯವರು ಗಂಟೆಗೆ 70 ಮೈಲಿಗಳಂತೆ 6,000 ಅಡಿ ಎತ್ತರವಿರತಕ್ಕ ಪರ್ವತ ಶಿಖರಗಳಮೇಲೂ ಕೂಡ ಸಂಚಾರ ಮಾಡುತ್ತಲಿರುವರು.

ಕಡಪಾ ಕಲೆಕ್ಟರಾದ ಮೆ॥ ಎ. ಆರ್. ಬಾನರ್ಜಿಯಾವರು ಮೈಸೂರು ಕೌನ್ಸಿಲ್ಲಿಗೆ ನಿಯಮಿಸಲ್ಪಡುವರೆಂದು ಬೆಂಗಳೂರಲ್ಲಿ ವರ್ತಮಾನವಿರುವುದೆಂಬದಾಗಿ ಕರ್ನಾಟಕ ಪತ್ರಿಕಾಕರ್ತರು ಬರೆದಿರುತ್ತಾರೆ. ನಮ್ಮ ಸಂಸ್ಥಾನದಲ್ಲಿ ೩೦-40 ವರ್ಷಗಳು ಕೆಲಸ ಮಾಡಿ ಅತ್ಯಂತ ಅನುಭವಶಾಲಿಗಳಾಗಿ ದೇಶಾಂತರಗಳ ದಿವಾನ್‌ಗಿರಿ ಮಾಡುವುದಕ್ಕೆ ಬೇಕಾದಾಗ್ಯೂ ಕಳುಹಿಸಲ್ಪಡುವುದಕ್ಕೆ ತಕ್ಕ ಯೋಗ್ಯತೆಯುಳ್ಳವರು ಅನೇಕರಿರುತ್ತಾರೆ. ಈ ವಿಷಯವು ನಮ್ಮ ಖಾವಂದರವರಿಗೆ ಚೆನ್ನಾಗಿ ತಿಳಿದಿರುವುದು. ಇಂಥಾದ್ದರಲ್ಲಿ ಮೆ॥ ಬಾನರ್ಜಿಯವರನ್ನು ಮೈಸೂರು ಕೌನ್ಸಿಲ್ಲಿಗೆ ತರುವಷ್ಟು ಔದಾಸೀನ್ಯವು ನಮ್ಮ ಮಹಾರಾಜರವರಿಗೆ ಇರುವುದೆಂದು ಭಾವಿಸುವುದು ಶುದ್ಧ ತಪ್ಪು. ನಮ್ಮ ಚೀಫ್ ಕೋರ್ಟಿಗೆ ಬೊಂಬಾಯಿನಿಂದ ಒಬ್ಬ ದೊಡ್ಡ ಮನುಷ್ಯರನ್ನು ತೆಗೆದುಕ್ಕೊಳ್ಳಬೇಕೆಂದು ಅತ್ಯಂತ ಘನತೆಯನ್ನು ಹೊಂದಿದ ಒಬ್ಬ ಬ್ರಿಟಿಷ್ ಅಧಿಕಾರಿಗಳು ನಮ್ಮ ಲೇಟ್ ಮಹಾರಾಜರವರಿಗೆ ಸೂಚಿಸಿದಾಗ ನಮ್ಮ ಪ್ರಜೆಗಳಲ್ಲಿ ಅಸಾಧಾರಣವಾದ ಪ್ರಜ್ಞಾವಂತರು ಇರುತ್ತಾರೆ. ಅವರಿಗೆ ಅನ್ಯಾಯ ಮಾಡುವುದಕ್ಕೆ ನನಗೆ ಇಷ್ಟವಿಲ್ಲ ಎಂದು ನಮ್ಮ ಲೇಟ್ ಖಾವಂದರವರು ಅಪ್ಪಣೆ ಕೊಡಿಸಿದರು. ಅಂಥಾವರ ಪುತ್ರರಾದ ನಮ್ಮ ಮಹಾರಾಜರವರು ನಮ್ಮ ದೇಶದವರನ್ನು ಉಪೇಕ್ಷಿಸಿ ಪರದೇಶೀಯರನ್ನು ನಮ್ಮ ದೇಶದ ಅಧಿಕಾರಗಳಿಗೆ ಎಂದಿಗೂ ತರಲಾರರೆಂದು ನಾವು ಧಾರಾಳವಾಗಿ ಹೇಳಬಹುದು.

ಯುಲ್ಪಟ್ಟ ಗುಂಡುಗಳ ಯುದ್ಧವೂ ಕೂಡ ನಡೆಯುತ್ತಲಿರುವುದು. ಸಾವಾಸನ್ ಎಂಬ ಪಟ್ಟಣದ ದಕ್ಷಿಣದಲ್ಲಿಯೂ ಗರ್ನೇ ನಂಬರು ಬೆಟ್ಟದ ಸವಿಾಪದಲ್ಲಿಯೂ ಗುಂಡಿನ ಯುದ್ಧಗಳೂ, ಬಾಂಬಿನ ಯುದ್ಧಗಳೂ, ಸುರಂಗದ ಯುದ್ಧಗಳೂ ಅತ್ಯಂತ ಭಯಂಕರವಾಗಿ ನಡೆಯುತ್ತಲಿರುವವು. ಜರ್ಮನೀ ದೇಶದ ೨ ನಿಸ್ಲೇನುಗಳೆಂಬ ಹಡಗುಗಳು, ಡೋವರ್ ಪಟ್ಟಣದ ಬಳಗೆ ಹೋಗಿ, ವಿಲಾಯತಿಗೆ ಮುತ್ತಿಗೆ ಹಾಕುವುದಕ್ಕೆ ಪ್ರಯತ್ನ ಮಾಡಿದವು. ಇವುಗಳಿಗೂ ಆಕಾಶ ಮಾರ್ಗದಿಂದ ಗುಂಡುಗಳನ್ನು ಹಾಕತಕ್ಕ ವಿಮಾನಗಳಿಗೂ ೨ ಬ್ರಿಟಿಷ್ ನಾವೆಯು ಯಂತ್ರಗಳಿಗೂ ಬಲವಾದ ಯುದ್ಧವು ನಡೆಯಿತು. ಪರ್ಷಿಯಾ ಎಂಬ ಹಡಗೆನ್ನು ತನ್ನ ಸಬ್‌ಮೆರೀನುಗಳು ಮುಳುಗಿಸಲಿಲ್ಲವೆಂದು ಆಸ್ಟ್ರಿಯಾದವರು ಸಂಯುಕ್ತ ಸಂಸ್ಥಾನಗಳಿಗೆ ಬರೆದಿರುತ್ತಾರೆ. ಸಾಲನೀಕಾ ಪಟ್ಟಣದಲ್ಲಿ ವಿಕಾಂತವಾಗಿ ೧೫,೦೦೦ ಪೆಟ್ರೋಲಿನ ಲೈಟರುಗಳನ್ನು ಬಚ್ಚಿಡಲ್ಪಟ್ಟಿತ್ತು. ಅದನ್ನು ಫ್ರೆಂಚ್ ಜನಗಳು ಸ್ವಾಧೀನಪಡಿಸಿಕೊಂಡರು. (ಬಂದು ಲೈಟರಿಗೆ ೬೧ ಘನ ಅಡಿ) ಬಾಲ್ಕ್ ರಂಗದಲ್ಲಿ ರ್ಮಾಸ್ಟರ್ ಮತ್ತು ಗೆವ್‌ಗಲೀ ಎಂಬ ಸ್ಥಳಗಳ ಮೇಲೆ ಮಿತ್ರಮಂಡಲಿಯವರು ೪೦೦ ಬಾಂಬುಗಳನ್ನು ಹಾಕಿದರು. ಆಸ್ಟ್ರಿಯಾ ದೇಶದವರು ಸ್ಕೂಟರಿಯನ್ನು ತೆಗೆದುಕೊಂಡರು ಇದಲ್ಲದೆ ನಿಕ್‌ಸಿಚ್, ಡ್ರೇಲೋಗ್ರಾಡ್, ಹಡ್‌ಗಾರಿಡ್ಸಾ ಎಂಬ ಸ್ಥಳಗಳನ್ನೂ ಆಸ್ಟ್ರಿಯಾ ದೇಶದವರು ಆಕ್ರಮಿಸಿದರು. ಆಸ್ಟ್ರಿಯಾದವರೂ, ಬಲ್ಗೇರಿಯಾದವರೂ ಬೇರೆಟ್ ಎಂಬ ಪ್ರಾಂತ್ಯವನ್ನು ತೆಗೆದುಕೊಂಡರು. ಬಲ್ಗೇರಿಯಾದವರು ವೆಲೋನಾ ಎಂಬ ಪಟ್ಟಣವನ್ನೂ, ಆಸ್ಟ್ರಿಯಾದವರು ದುರಾಜೋ ಎಂಬ ಪಟ್ಟಣವನ್ನೂ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಲಿದಾರೆ. ಮಾಂಟಿನೀಗ್ರೋ ಸಂಸ್ಥಾನದ ಪ್ರಭುಗಳೂ ಮತ್ತು ರಾಣಿಯವರೂ ಅವರ ದೇಶವನ್ನು ಬಿಟ್ಟು ಹೋಗುವಾಗ್ಗೆ ಅವರ ಹಡಗಿನ ಮೇಲೆ ಆಸ್ಟ್ರಿ

ವರಿಬ್ಬರಿಗೂ ನಾಲ್ಕು ನಾಲ್ಕಾಣೆಯಂತೆ ಜುಲ್ಮಾನೆಯು ವಿಧಿಸಲ್ಪಟ್ಟಿತು.

ನಮ್ಮ ಶ್ರೀಮತ್ ಮಹಾರಾಜರು ಬನಾರಿಸ್ ಯೂನಿವರ್ಸಿಟಿಗೆ ಎರಡು ಲಕ್ಷ ರೂಪಾಯಿಗಳನ್ನೂ ಮುಂದೆ ಹತ್ತು ವರ್ಷಗಳ ವರೆವಿಗೂ ತಿಂಗಳಿಗೆ ೧ ಸಾವಿರ ರೂಪಾಯಿ ನಪ್ರಕಾರ ಗ್ಯಾಂಟನ್ನೂ ದಯಪಾಲಿಸಿರುವರು.

ಕಳೆದ ೨೬ನೇ ತಾರೀಖು ರಾಜಧಾನಿಯ ಸಂತೆಪೇಟೆಯಲ್ಲಿ ರೊಟ್ಟೀ ಅಂಗಡಿ ಇಟ್ಟಿರುವ ಮು॥ ನರಸಿಹ್ಮಯ್ಯಂಗಾರ್ಯರ ಅಂಗಡಿಯಲ್ಲಿ ಕಳುವಾಗಿ ಸುಮಾರು ೨೬ ರೂಪಾಯಿ ಬೆಲೆಬಾಳುವಷ್ಟು ಸಾಮಾನುಗಳು ನಷ್ಟವಾಗಿರುವುದಾಗಿ ತಿಳಿಯಬರುತ್ತದೆ.

ಈ ತಿಂಗಳು 31ನೇ ತಾರೀಖಿನಲ್ಲಿ ಮೈಸೂರು ಎಡ್ಯುಕೇಷನ್ ಯೂನಿಯನ್ ಎಂಬ ಸಂಘದಲ್ಲಿ ಮೈಸೂರು ಯೂನಿವರ್ಸಿಟಿಯ ವಿಷಯದಲ್ಲಿ ಒಂದು ವಾಕ್ಯಾರ್ಥವು ನಡೆಯುವುದು. ಮು॥ ಎಂ. ವೆಂಕಟಕೃಷ್ಣಯ್ಯನವರು ಈ ವಿಷಯದಲ್ಲಿ ಚರ್ಚೆಯನ್ನು ಉಪಕ್ರಮಿಸುವರೆಂದು ತಿಳಿಯಬರುತ್ತದೆ.

ನಾಳೇ ದಿವಸ ಶ್ರೀಮತ್ ಮಹಾರಾಜರವರ ಸಂಸ್ಕೃತ ಕಾಲೇಜಿನಲ್ಲಿ ಶ್ರೀ ಶೃಂಗೇರಿ ಜಗದ್ಗುರುಗಳವರು ಮೈಸೂರು ಮಹಾ ಜನಗಳಿಗೆ ಶ್ರೀ ಶಾರದಾಂಬಾ ಪ್ರತಿಷ್ಠೆಯ ವಿಷಯದಲ್ಲಿಯೂ ನಮ್ಮ ಲೇಟ್ ಜಗದ್ಗುರುಗಳ ಪ್ರತಿಮೆಯ ಪ್ರತಿಷ್ಠೆಯ ವಿಷಯದಲ್ಲಿಯೂ, ಕಳುಹಿಸಿರುವ ಶ್ರೀ ಮುಖವು ಓದಲ್ಪಡುವುದು.

ಮೆಡಿಕಲ್ ಆಫೀಸರುಗಳ ವರ್ಗಾವರ್ಗಿ:—ಮು॥ ಟಿ. ವಿ. ಕುಪ್ಪಸ್ವಾಮಿ ಮೊದಲಿಯಾರ್‌ರವರು ಕೋಲಾರದ ಚಿನ್ನದಗಣಿಯಿಂದ ಬೆಂಗಳೂರು ಡಿಸ್ಟ್ರಿಕ್ಟಿಗೂ, ಮು॥ ಮುತ್ತುಸ್ವಾಮಿದಾಸ್‌ರವರು ಬೆಂಗಳೂರು ಡಿಸ್ಟ್ರಿಕ್ಟಿನಿಂದ ಕೋಲಾರದ ಚಿನ್ನದಗಣಿಗೂ, ಮು॥ ಟಿ. ಎಸ್. ನಂಜಪ್ಪನವರು ರಜಾ ಪೂರೈಸಿದ ಮೇಲೆ ವಿಕ್ಟೋರಿಯಾ ಆಸ್ಪತ್ರೆಗೂ ವರ್ಗಾಯಿಸಿರುತ್ತಾರೆ.

ರಾಜಧಾನಿಯಲ್ಲಿ ಅಕ್ವೈರ್ ಮಾಡಿದ ಮನೆಗಳನ್ನು ಕೆಡವುವುದಕ್ಕೆ ಮುಂಜೆ ಆ ಮನೆಗಳಲ್ಲಿ ವಾಸವಾಗಿದ್ದವರು